**CW-19**
**PW-9**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1577/2025

ಸಾಕ್ಷಿದಾರರ ಹೆಸರು : ಶ್ರೀ ಭವಿತ್ ರಾಜ್

ತಂದೆಯ ಹೆಸರು : ಕಿಟ್ಟಣ್ಣ ರೈ

ಪ್ರಾಯ : 36 ವರ್ಷ

ಉದ್ಯೋಗ ಪೋ ಮ್ಯು ಪೇದೆ, ಪುತ್ತೂರು ಗ್ರಾಮಾಂತರ ಪೋ ಠಾಣೆ

ವಾಸಸ್ಥಳ : ಪಾಲ್ತಾಡಿ ಗ್ರಾಮ, ಕಡಬ ತಾ.

ದಿನಾಂಕ:**04.06.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಕಳೆದ 1 ವರ್ಷದಿಂದ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೋ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.6-4-2025 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದನ್ನು ಠಾಣಾ ಗುನ್ನಾ ಸಂ.40-2025 ರಂತೆ ನೊಂದಾಯಿಸಿಕೊಂಡು ಪ್ರ ವ ವ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಅಸಲು ಪ್ರತಿಯನ್ನು ಹಾಗೂ ಪ್ರತಿಗಳನ್ನು ನಮ್ಮ ಮೇಲಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತೇನೆ.

ದಿ.7-4-25 ರಂದು ಚಾಸಾ-5 ಮತ್ತು 6 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿರುತ್ತೇನೆ. ನಂತರ ಠಾಣಾ ಆವರಣದಲ್ಲಿ ನಿಲ್ಲಿಸಿದಂತಹ ಕೆಎ-21-ಇಇ-2600 ವಾಹನವನ್ನು ಪಂಚರ ಸಮಕ್ಷಮ ಸ್ವಾಧೀನಪಡಿಸಿಕೊಂಡಿದ್ದೇನೆ. ಆರೋಪಿತರಿಗೆ ಐ ಎಮ್ ವಿ ಕಾಯಿದೆ ಕಲಂ 133 ರಡಿಯಲ್ಲಿ ನೋಟೀಸ್ ಜಾರಿಗೊಳಿಸಿರುತ್ತೇನೆ. ನಂತರ ಚಾಸಾ-1 ರಿಂದ 3 ಚಾಸಾ 5 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ಚಾಸಾ-2 ಮತ್ತು 3 ರವರು ನಿಪಿ-7 ಹಾಗೂ 9 ರಂತೆ ನನ್ನ ಸಮಕ್ಷಮ ಹೇಳಿಕೆಗಳನ್ನು ನೀಡಿರುತ್ತಾರೆ.

ಆರೋಪಿ ರಾಕೇಶ್ ನಾಯಕ್ ರವರ ಚಾಲನಾ ಪರವಾನಗಿಯನ್ನು ವಶಕ್ಕೆ ಪಡೆಯುವ ಕುರಿತು ನೋಟೀಸನ್ನು ಜಾರಿಗೊಳಿಸಿದ್ದೇನೆ. ನಂತರ ಚಿಕಿತ್ಸೆ ಪಡೆದ ಅಶ್ವಿನಿಯವರ ಗಾಯದ ಪ್ರ ಪತ್ರವನ್ನು ನೀಡುವ

ಬಗ್ಗೆ ವೈದ್ಯಾಧಿಕಾರಿಯವರಿಗೆ ಮನವಿ ಪತ್ರ ನೀಡಿದ್ದೇನೆ. ಅಪಘಾತಪಡಿಸಿದ ವಾಹನದ ಪರಿವೀಕ್ಷಣೆ ನಡೆಸಿ ವರದಿ ನೀಡುವಂತೆ ಆರ್ ಟಿ ಒ ಪುತ್ತೂರುರವರಿಗೆ ಮನವಿ ಪತ್ರ ಸಲ್ಲಿಸಿದ್ದೇನೆ.

ಅಪಘಾತ ಸ್ಥಳದಲ್ಲಿ ಮಾಡಿದ ಮಹಜರು ಸಂಬಂಧ ನಡೆಸಿದ ವಿಡಿಯೋ ಚಿತ್ರೀಕರಣ ಸಂಬಂಧಿತ ಡಿವಿಡಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ನಾನು ಆರ್ ಟಿ ಒ ರವರಿಂದ ಐ ಎಮ್ ವಿ ವರದಿಯನ್ನು ಸ್ವೀಕರಿಸಿರುತ್ತೇನೆ. ನಂತರ ಕಡತವನ್ನು ಚಾಸಾ-23 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ-1 ದಾಖಲೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವ ಯನ್ನು ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಪ್ರ ವ ವ ಯನ್ನು ನಿಪಿ-23 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು 23 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಮತ್ತು ನಿಪಿ-3 ರಲ್ಲಿನ ತಮ್ಮ ಸಹಿಗಳನ್ನು ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಡಿ ಹಾಗೂ 3ಡಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಮಹಜರು ಕಾಲದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ-4 ದಾಖಲೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4ಡಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-11 ರಿಂದ 15 ದಾಖಲೆಗಳನ್ನು ನೋಡಿ ಅವುಗಳಲ್ಲಿನ ತಮ್ಮ ಸಹಿಗಳನ್ನು ಗುರುತಿಸಿದ್ದು ಸದರಿ ದಾಖಲೆಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-11ಎ, 12ಎ, 13ಎ, 14ಎ ಹಾಗೂ 15ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತಪಡಿಸಿದ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ5 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಎ ಡಿ ಆರ್ ವಕೀಲರಿಂದಃ

ನಿಪಿ-1 ರಲ್ಲಿ ದಿ.5-4-25 ರಂದು ಮ.3.00 ಗಂಟೆ ಸಮಯಕ್ಕೆ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿದ್ದೇನೆ ಎಂದು ನಮೂದಿರುವುದು ತಪ್ಪು ಎಂದರೆ ಸರಿ. ತಕ್ಷೀರು ಸ್ಥಳದಲ್ಲಿನ ಆಸುಪಾಸಿನಲ್ಲಿ ವಾಸಿಸುವ ವ್ಯಕ್ತಿಗಳನ್ನು ಸ್ಥಳ ಮಹಜರು ಕಾಲದಲ್ಲಿ ಪಂಚರನ್ನಾಗಿ ಮಾಡಿಲ್ಲ ಎಂದರೆ ಸರಿ. ತಕ್ಷೀರು ಸ್ಥಳದಲ್ಲಿ ಸ್ಥಳ ಮಹಜರಿಗೆ ಹೋದಾಗ ಸ್ಥಳದಲ್ಲಿ ಟೈರ್ ಮಾರ್ಕ್‌ಗಳಾಗಲೀ ಅಥವಾ ವಾಹನದ ಗಾಜಿನ ಚೂರುಗಳಾಗಲೀ ಬಿದ್ದಿದ್ದ ಕುರುಹುಗಳು ಇರಲಿಲ್ಲ ಎಂದರೆ ಸರಿ. ಅಪಘಾತ ಸ್ಥಳ ಎಂದು ತೋರಿಸಿರುವ ಜಾಗ ಕಲ್ಲು ಚಪ್ಪಡಿಗಳನ್ನು ಹಾಕಿರುವ ಸ್ಥಳ ಎಂದರೆ ಸರಿಯಲ್ಲ.

ನಿಪಿ-6 ಭಾವಚಿತ್ರದಲ್ಲಿ ಚಪ್ಪಡಿ ಕಲ್ಲಿನ ಮೇಲೆ ಚಾಸಾ-1 ನಿಂತಿದ್ದಾರೆ ಎಂದರೆ ಸರಿ. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮಹಜರನ್ನು

ನಾನು ತಕ್ಷೀರು ನಡೆದ ಸ್ಥಳದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾವು ಪೋ. ಠಾಣೆಯಲ್ಲಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-3 ದಾಖಲೆಯನ್ನೂ ಕೂಡಾ ತಕ್ಷೀರು ನಡೆದ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ತೋರಿಸಿರುವ ವಾಹನವನ್ನು ತಕ್ಷೀರು ನಡೆದ ಸ್ಥಳದಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿ. ನಿಪಿ-5 ಛಾಯಚಿತ್ರಗಳನ್ನು ಪೋ. ಠಾಣೆಯಲ್ಲಿಯೇ ತೆಗೆಯಲಾಗಿದೆ ಎಂದರೆ ಸರಿ.

ಚಾಸಾ-1,2 ಚಾಸಾ-5 ಹಾಗೂ ಚಾಸಾ-7 ರವರು ನನ್ನ ಸಮಕ್ಷಮ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಾಹನ ಮೃತ ವ್ಯಕ್ತಿಗೆ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ. ಅಶ್ವಿನಿ ಎನ್ನುವವರಿಗೆ ಅಪಘಾತದಲ್ಲಿ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನಾನು ತಕ್ಷೀರು ನಡೆದ ಸ್ಥಳದಲ್ಲಿ ಸಾಕ್ಷಿದಾರರಿಗೆ ಯಾವುದೇ ನೋಟೀಸ್ ಜಾರಿಗೊಳಿಸಿಲ್ಲ ಎಂದರೆ ಸರಿಯಲ್ಲ. ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ನಿರಪರಾಧಿಯಾದ ಆರೋಪಿಯ ವಾಹನವನ್ನು ದುರ್ಬಳಕೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.